ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ 10 ಸಾವಿರ ಟನ್ನುಗಳಷ್ಟು ಸ್ಪೇಟ್ ಜ್ರೋಡಿಂಗ್ ಕಾರ್ಪೊರೇಷನ್ ಕೊಳ್ಳುವುದನ್ನು ಪ್ರಾಸ್ತಾಪಮಾಡಿದೆ. ಅವರು ಯಾವ ದರದಲ್ಲಿ ಕೊಳ್ಳುವ ಹಾಗೆ ಪರಿಶೀಲನೆ ಮಾಡಿದ್ದೀರಿ? ಸರ್ಕಾರದವರು ಒಂದು ದರವನ್ನು ಗೊತ್ತುಮಾಡಿದರೆ ಅದರ ಪ್ರಕಾರ ಕೊಳ್ಳುವುದಕ್ಕೆ ಸಾಧ್ಯವೇ?

ಶ್ರೀ ಕೆ. ಎಚ್. ಪಾಟೀಲ್.—ಸರ್ಕಾರ ಈ ವಿಷಯದಲ್ಲಿ ದರವನ್ನು ಜಾಸ್ತಿಮಾಡುವುದಕ್ಕೆ ಆಗುವುದಿಲ್ಲ. ಮಾರ್ಕೆಟ್ ರೇಟ್ ನೋಡಿ ರೈತರಿಗೆ ಹಾನಿ ಆಗಬಾರದಂತೆ ಅದಿನ್ನು ಖರೀದಿ ಮಾಡ ಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀ ವಿ. ಎನ್. ಪಾಟೀಲ್.—ಇದರಲ್ಲಿ ಏನೋ ಕಾಂಟ್ರಡಿಕ್ಷನ್ ಇದೆ. ಇದು ಇಕಾನಮಿ ಸ್ಪೇಟ್ ಆಗಿರುವುದರಿಂದ ಇದರ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಯಾವುದಾದರೂ ಒಂದು ಮೆಷಿನರಿಯನ್ನು ಇಟ್ಟಿದ್ದೀರಾ?

ಶ್ರೀ ಕೆ. ಎಚ್. ಪಾಟೀಲ್.—ಅದಕ್ಕೆ ಈಗಾಗಲೇ ಪ್ರಯತ್ನಮಾಡಿದ್ದೇವೆ.

ಶ್ರೀ ಎಸ್. ಎಂ. ಚಂದ್ರಶೇಖರ್.—ಈಗ ಅನೇಕ ತರಗತಿಗಳ ಅಡಿಕೆ ಇರುತ್ತದೆ. ಯಾವ್ಯಾವು ದಕ್ಕೆ ಎಷ್ಟೆಷ್ಟು ಕಾಸ್ಟ್ ಬರುತ್ತದೆ? ಅದರ ಬಗ್ಗೆ ಒಂದು ನಿರ್ದಿಷ್ಟವಾದ ವರದಿ ಬರಬೇಕಾದರೆ ಬಹಳ ಕಾಲವಾಗುತ್ತದೆ. ಅದಕ್ಕೆ ಏನು ಹೇಳುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್.—ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಆಫೀಸಿನಲ್ಲಿ ಅಡಿಕೆ ಬಗ್ಗೆ ದರವನ್ನು ಇಷ್ಟು ಎಂದು ನಿಗದಿಮಾಡಿದ್ದಾರೆ. ಈ ವಿಚಾರದಲ್ಲಿ ಒಂದು ನಿರ್ದಿಷ್ಟವಾದ ವರದಿ ಬರುತ್ತದೆ. ಆದರೂ ನಾವು ಪ್ರೊಡ್ಯೂಸರ್ಸ್ ಹಿತ ದೃಷ್ಟಿಯಿಂದ ನೋಡಬೇಕು. ದರ ನಿಜವಾಗಿ ಏನಿದ್ದಿತೆಂಬುದನ್ನೂ ಸಹ ನಾವು ತಿಳಿದುಕೊಳ್ಳಬೇಕಾಗಿದೆ.

(*ii*) *re* : **Damage caused to hybrid Jawar Crop in Dharwar District.**

ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು).—ಧಾರವಾಡ ಜಿಲ್ಲೆಯ ದಕ್ಷಿಣ ಭಾಗಗಳಲ್ಲಿ ಹಾಲಿ ಇರುವ ಮಿಶ್ರ ತಳಿಯ ಜೋಳದ ಬೆಳೆಗೆ ನಷ್ಟ ಉಂಟಾಗಿದೆ ಎಂಬ ವಿಚಾರದ ಬಗ್ಗೆ ಒಕ್ಕಲುತನದ ಶಾಖೆಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

Sri K. H. PATIL.—In reply to the Call Attention notice given by Sriyuths F. S. Taware, V. V. Wai and K. F. Patil I state as follows :

The pest which comes by the name (ಬೆಂಕಿಹುಳು) ear-head midge on Jowar is usually observed while the ear-head emerges and at present the Khariff Jowar crop which is sown in these Taluks is not in the ear-head stage, but is in a very young stage of growth.

The Summer Hybrid Jowar which was sown during the latter half of May and June, 1972 has come to ear-head stage at present. The total area is approximately about 1,000 acres and the pest has been observed on about 300 acres only in Villages Agadi and Kotenahally. It is not of a serious kind at present. Arrangements have been made to rush the pesticide needed from Davangere to Haveri for stocking in that taluka.

Regarding the protection of the Khariff crop during the succeeding months when the ear-head emerge out, arrangements have already been made to stock sufficient pesticide in Haveri as usual and there will be no difficulty for the farmers in obtaining their needs of pesticide like Malathion 5 per cent dust, Methyl Parathion 2 per cent dust etc. The farmers are being educated to take up timely control measures by dust in the crop just while the ear-head emerges so that the possible damages are prevented well in time.

(SRI K. H. PATIL)

The farmers have also been advised through various means to undertake this work. Care will be taken to see that all precautions are taken to educate the farmers in time for this purpose and sufficient quantity of pesticides are stocked in the places where it is needed. The Agro Industries Corporation has been instructed to take immediate action to stock the pesticides.

10 Tonnes of Methyl parathion 2 per cent dust has already reached Haveri. Another 10 tonnes of the chemical are under transit.

Further 16 tonnes of Malathion and 5 tonnes of Methyl Parathion are being supplied to Dharwar. Similarly 10 tonnes of Methyl parathion are being sent to Hubli. Further supply of the chemicals will be made as and when indents from the Deputy Director of Agriculture, Dharwar are received.

ಶ್ರೀ ಎಫ್. ಎಸ್. ತಾವರೆ.—ಮಾನ್ಯ ಸಚಿವರು ತ್ವರಿತಗತಿಯಿಂದ ಈ ವಿಷಯವನ್ನು ಕಳುಹಿಸಿಕೊಟ್ಟಿದ್ದಕ್ಕಾಗಿ ನಾನು ಅಭಿನಂದಿಸುತ್ತೇನೆ. ಇದನ್ನು ಇಷ್ಟಕ್ಕೇ ಬಿಡದೆ ಚೆಕ್ ಮಾಡ ಬೇಕು. ಕಳೆದ 3—4 ವರ್ಷಗಳಿಂದ ಈ ವ್ಯಾಧಿ ಬೆಳೆಯುತ್ತಿದೆ. ಮುಂದೆ ಇದು ಇನ್ನೂ ಜಾಸ್ತಿ ಯಾಗುತ್ತದೆ. ಸುಮಾರು ಒಂದು ಸಾವಿರ ಎಕರೆಯಷ್ಟು ಬೆಳೆಗೆ ಹುಳು ಬಿದ್ದಿದೆ. ಮೇ ಮತ್ತು ಜೂನ್‌ನಲ್ಲಿ ರೋಹಿಣಿ ಮಳೆ ಬಿತ್ತು. ನಮ್ಮ ಜಿಲ್ಲೆಯ 8 ತಾಲ್ಲೂಕುಗಳಲ್ಲಿ ಸುಮಾರು ಒಂದೂವರೆ ಲಕ್ಷ ಎಕರೆಯಷ್ಟು ಬೆಳೆ ಕೆಟ್ಟಿತ್ತು. ಅಗ್ರಿಕಲ್‌ಚರಲ್ ಯೂನಿವರ್ಸಿಟಿ ಸಂಶೋಧನೆಯವರು ಅಲ್ಲಿಗೆ ತಕ್ಕ ಸಿಬ್ಬಂದಿಯನ್ನು ಕಳುಹಿಸಿ ಆ ಬೆಳೆಗೆ ಹುಳು ಏಕೆ ಬೀಳುತ್ತದೆ ಎಂಬ ಬಗ್ಗೆ ತೀಪ್ರ ಪರೀಕ್ಷೆ ಮಾಡಿಸಿ ನಿರಂತರವಾದ ಪರಿಹಾರವನ್ನು ಕಂಡುಹಿಡಿಯಬೇಕು. ಎರಡನೆಯದಾಗಿ ಇದು ಒಂದು ರಾಷ್ಟ್ರೀಯ ವ್ಯಾಧಿ ಎಂಬುದಾಗಿ ಹೇಳಿದರೆ ತಪ್ಪಾಗಲಾರದು. ಆದ್ದರಿಂದ ಸರ್ಕಾರದವರು ಇದನ್ನು ಕಂಟ್ರೋಲ್ ಮಾಡುವದು ಬಹು ಮುಖ್ಯವಾದ ಹೊಣೆಯಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್.—ಈಗಾಗಲೇ ಸರ್ಕಾರ ಆ ಬಗ್ಗೆ ಕ್ರಮ ತೆಗೆದುಕೊಂಡಿದೆ. ಅಗ್ರಿಕಲ್‌ಚರಲ್ ಯೂನಿವರ್ಸಿಟಿಯವರು ಈಗಾಗಲೇ ಸೂಕ್ತ ಕ್ರಮ ತೆಗೆದುಕೊಂಡಿದ್ದಾರೆ ಎಂಬುದಾಗಿ ನಾನು ಆಶಯಮಾಡುತ್ತೇನೆ.

MADAM SPEAKER.—The House will now adjourn and meet again to-morrow at 10 A.M.

The house adjourned at Twenty minutes past Seven of the Clock to meet again at Ten of the Clock on Thursday, the 13th July 1972.

WD 18196— GPB—550— 27-11-1972